Regd No BG 155 20-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ರಾಜಧನ ಚರ್ಚೆ – ನಧದಲ್ಲೇ ಮುಕ್ತಾಯ

ನಿಧನ

ನವದೆಹಲಿ— ರಾಜ್ಯಸಭೆಯ ಮಾಜಿ ಉಪ ಸಭಾಪತಿ ಶ್ರೀಮತಿ ಪಯೊಲೆಟ್ ಆಳ್ವರು ಈ ಬೆಳಿಗ್ಗೆ ಹಠಾತ್ತನೆ ನಿಧನರಾದರು

★

ಖಾನರ ಭಾಷಣ

ನವದೆಹಲಿ— ಪಾರ್ಲಿಮೆಂಟಿನ ಎರಡು ಸದನಗಳಲ್ಲೂ ಭಾಷಣ ಮಾಡಲು ಖಾ ಅಬ್ದುಲ್ ಗಫಾರ್ ಖಾನರನ್ನು ಕೇಳಿಕೊಳ್ಳಲಾಗುವುದೆಂದು ಪ್ರಕಟವಾಗಿದೆ.

★

ರಾಬಟ್ ಖರ್ಚು

ನವದೆಹಲಿ— ರೂ. 3306 ವಿದೇಶೀ ವಿನಿಮಯವೂ ಸೇರಿ ಸುಮಾರು 49705 ರೂಗಳು ರಾಬರ್ಟ್ ಸಮ್ಮೇಳನಕ್ಕೆ ಹೋಗಿದ್ದ ಭಾರತ ನಿಯೋಗದ ಖರ್ಚೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

●

ನಿರಕ್ಷರತೆ

ಮೈಸೂರು— ದೇಶದಲ್ಲಿ ನಿರಕ್ಷರತೆಯನ್ನು ತೊಡೆದುಹಾಕಬೇಕೆಂದು ಜಿಲ್ಲಾಧಿಕಾರಿಗಳು ಶ್ರೀ ಎಸ್ ಪಿ ಸಿಂಗ್‌ರವರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತಿತರರ ಸಮ್ಮೇಳನದಲ್ಲಿ ತಿಳಿಸಿದರು.

★

ಲಾಯರುಗಳ ಹೇಳಿಕೆ

ಬೆಂಗಳೂರು— ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ ಪಾರ್ಟಿಯ ಪ್ರಾಥಮಿಕ ಸದಸ್ಯತ್ವದಿಂದ ತೆಗೆದುಹಾಕಿರುವದು ಸರಿಯೆಂದು ನಗರದ 68 ಅಡ್ವೊಕೇಟರು ಜಂಟಿ ಹೇಳಿಕೆಯಲ್ಲಿ ತಿಳಿಸಿರುವರು.

★

ಪಾಕಿಸ್ತಾನಕ್ಕೆ ರಷ್ಯಾ ಸರಬರಾಜು

ನವದೆಹಲಿ.....ತಿಳಿದುಬಂದಿರುವ ವರ್ತಮಾನದಂತೆ ರಷ್ಯಾ ಪಾಕಿಸ್ತಾನಕ್ಕೆ ಟ್ಯಾಂಕು,ಎಗಳ 130 ಎಂಎಂ ಬಂದೂಕಗಳು, ಮತ್ತು ಮದ್ದು, ರೇಡರ್‌ಸೆಟ್‌ಗಳು, ಹೆಲಿಕಾಪ್ಟರುಗಳು, ಟ್ಯಾಂಕಿದ ಬಿಡಿ ಭಾಗಗಳು, ಇತರ ಮಿಲಿಟರಿ ಧಾಸ್ತಾನುಗಳನ್ನು ಸರಬರಾಜು ಮಾಡಿರುವುದು ಎಂದು ಲೋಕ ಸಭೆಯಲ್ಲಿ ತಿಳಿಸಲಾಯಿತು – ಇವುಗಳ ಪ್ರಮಾಣವು ಗೊತ್ತಾಗಿದ್ದರೂ ಇಲ್ಲ ತಿಳಿಸುವುದು ಸರಿಯಲ್ಲ ವೆಂದೂ ಹೇಳಲಾಯಿತು.

●

ರೈಲ್ವೇ ಅಕಸ್ಮಿಕ

ನವದೆಹಲಿ— 67–68 ರಲ್ಲಿ 1111 ರೈಲ್ವೇ ಅಕಸ್ಮಿಕಗಳಾಗಿದ್ದು, 68–69 ರಲ್ಲಿ 908 ಕ್ಕೆ ಇಳಿದಿರುವದಾಗಿ ಲೋಕ ಸಭೆಯಲ್ಲಿ ತಿಳಿಸಲಾಯಿತು.

ನೇರ ಸಾಲ

ನವದೆಹಲಿ—ಮುಂದಿನ ಎರಡು ವರ್ಷಗಳಲ್ಲಿ ರೈತರಿಗೆ ನೇರವಾಗಿ ಸಾಲಾ ನೀಡಲು ಸ್ಟೇಟ್ ಬ್ಯಾಂಕು ಸೇರಿ ರಾಷ್ಟ್ರೀಕರಣ ಮಾಡಲ್ಪಟ್ಟ ವಾಣಿಜ್ಯ ಬ್ಯಾಂಕುಗಳು ರೂ. 500 ಕೋಟಿ ನಿಗದಿ ಮಾಡಿವೆ.

ಅದುತ ಸಾಹಸ

ಬ

ಹೌಸ್ಟ್— ಚಂದ್ರನಲ್ಲಿ ಅಣುಶಕ್ತಿ ಜನರೇಟರನ್ನು ಇಡಲು ಹೋದ ಇಬ್ಬರು ಹೋದ ಇಬ್ಬರು ಗಗನಯಾಮಿಗಳು ಚಂದ್ರನಲ್ಲಿನ ಬಿರುಗಾಳಿಯ ಧೂಳಿನ ಸಾಗರದಲ್ಲಿ ಸುತ್ತಾಡಿದರು.

ವಸ್ತುಪ್ರದರ್ಶನ

ಮೈಸೂರು— ತಾ ॥ 23 ಭಾನುವಾರ ಬೆಳಿಗ್ಗೆ ವಸ್ತುಪ್ರದರ್ಶನದಲ್ಲಿ ವಿಶ್ವ ವಿದ್ಯಾನಿಲಯದ ಉಪಕುಲಪತಿ ಪ್ರೊ॥ ಜವರೇಗೌಡರು ಬಹುಮಾನ ವಿನಿಯೋಗ ಮಾಡುವರು ; ರಾಜ್ಯದ ಕೈಗಾರಿಕಾ ಮತ್ತು ವಾರ್ತಾ ಮಂತ್ರಿ ಶ್ರೀ ರಾಜಶೇಖರ ಮೂರ್ತಿಯವರು ಅಧ್ಯಕ್ಷತೆ ವಹಿಸುವರು.

ರಾಜಧನ

ನವದೆಹಲಿ— ರಾಜರೊಡನೆ ರಾಜಧನ ವಿಷಯದಲ್ಲಿನ ಚರ್ಚೆಯು ಮುಂದಿನ ವರ್ಷ ಕಡೆಯೊಳಗೆ ಮುಗಿಯುವಂತಿದೆಯೆಂದೂ, ನಂತರ ಸರ್ಕಾರ ತನ್ನ ನಿರ್ಧಾರ ಕೈಕೊಳ್ಳಲಿದೆಯೆಂದೂ ರಾಜ್ಯ ಸಭೆಯಲ್ಲಿ ತಿಳಿಸಲಾಯಿತು

★

ಗಡಿ ಮಾತುಕತೆ

ಹಾಂಕಾಂಗ್— ರಷ್ಯಾ–ಚೀನಾ ಗಡಿ ಬಗ್ಗೆ ಮಾತುಕತೆ ಏನೂ ಪ್ರಯೋಜನವಾಗಲಿಲ್ಲ.

★

ಸೊಸೈಟಿಗಳೂ ಏಜೆಂಟರು

ಶಿವಮೊಗ್ಗ— ತಾಲ್ಲೂಕು ಮಾರ್ಕೆಟಿಂಗು ಸೊಸೈಟಿಗಳು ಭತ್ತ ಕೊಳ್ಳುವ ಏಜೆಂಟರನ್ನಾಗಿ ಮಾಡಲಾಗಿದೆ.

ಪಾಕಿಸ್ತಾನದಲ್ಲಿನ ಮಾರ್ಷಿಯಲ್ ಲಾ

ನವದೆಹಲಿ— ಮುಂದಿನ ವರ್ಷದ ಕಡೆಯವರೆಗೆ ಪಾಕಿಸ್ತಾನದಲ್ಲಿ ಈಗಿರುವ ಮಾರ್ಷಿಯಲ್ ಲಾ ತೆಗೆಯುವ ಸಂಭವವಿಲ್ಲವೆಂದು ಪಾಕಿಸ್ತಾನದ ನ್ಯಾಯಾಂಗ ಮಂತ್ರಿ ಕೊರ್ಲೀನಿಯಸ್ ಹೇಳಿರುವರು.

★

ರಜಾ ಕೊಟ್ಟದ್ದರ ಬಗ್ಗೆ ಪ್ರಶ್ನೆ

ನವದೆಹಲಿ— ಉತ್ತರ ವಿಯೆಟ್ನಾಂ ಅಧ್ಯಕ್ಷ ಡಾ ॥ ಹೊ ಚಿ ಮಿನ್ಹ್ ನಿಧನ ಬಗ್ಗೆ ಶೋಕಿಸಲು ಕೇರಳ ಮತ್ತು ಪಶ್ಚಿಮ ಬಂಗಾಳಾ ಸರಕಾರಗಳು ರಜ ಕೊಟ್ಟಿದ್ದರ ಬಗ್ಗೆ ರಾಜ್ಯಸಭೆಯಲ್ಲಿ ಪ್ರಶ್ನಿಸಲಾಯ್ತು.

ಅಯೂಬ್

ರವರ ಮೇಲಿನ ಆರೋಪ

ನವದೆಹಲಿ— ಪಾಕಿಸ್ತಾನದ ಮಾಜಿ ಅಧ್ಯಕ್ಷ ಅಯೂಬರು ತಮ್ಮ 10 ವರ್ಷಗಳ ಆಡಳಿತ ಕಾಲದಲ್ಲಿ ವಿದೇಶೀ ಬ್ಯಾಂಕುಗಳಲ್ಲಿ 13 ಕೋಟಿ ಪೌಂಡು ವಿದೇಶೀ ವಿನಿಮಯ ಠೇಜರಿಸಿರುವರೆಂದು ಪಶ್ಚಿಮ ಬಂಗಾಳಾದ ಪ್ರಮುಖ ಭೂಸ್ವಾಮಿ ಮುಕಾಡ್‌ನ ಜ್ಞಾರವರು ನಿಲಿಟಿಶ್ ಕೋರ್ಟಿನಲ್ಲಿ ಕೊಟ್ಟ ಪ್ರಮಾಣಪತ್ರಿಕೆಯಲ್ಲಿ ತಿಳಿಸಿರುವರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ಮಗುವನ್ನು ರಕ್ಷಿಸಿ ತಾನು ಸತ್ತ ರೈಲ್ವೇ ಗೇಟ್‌ಮ್ಯಾನ್

ಪೂರ್ವ ರೈಲ್ವೆಯ ಅಲೂಯಾ ಹೆತ್ತಿರ ಲೆವಲ್ ಕ್ರಾಸಿಂಗ್ ಸಮೀಪದಲ್ಲಿ ಒಂದು ಮಗು ರೈಲ್ವೆ ರಸ್ತೆ ಹಾದು ಹೋಗುತ್ತಿತ್ತು. ಆ ಸಮಯದಲ್ಲಿ ಬರುತ್ತಿದ್ದ ರೈಲಿಗೆ ಸಿಕ್ಕಿ ಬಿಡುತ್ತಿತ್ತು. ಇದನ್ನು ಕಂಡ ರೈಲ್ವೇಗೇಟ್‌ಮ್ಯಾನ್ ರಾಂಸ್ಯಾರಿ ಹರಿ ಪರಿವರ್ಜ ಓಡಿ ಬಂದು ಮಗುವನ್ನು ರೈಲಿಗೆ ಸಿಕ್ಕದಂತೆ ಕಂಬಿ ಆಚೆಗೆ ತಳ್ಳಿದನು. ಮಗುವು ಬದುಕಿಕೊಂಡಿತಾದರೂ, ರಾಂ ಸ್ಯಾರಿ ರೈಲಿಗೆ ಸಿಕ್ಕಿ ಸತ್ತುಹೋದನು. ಎಂತಹ ಪ್ರಶಂಸನೀಯ ಸಾಹಸ ಕಾರ್ಯ! ಆತನ ಸಂಸಾರಕ್ಕೆ ರೂ. 500 ಪರಿಹಾರ ಕೊಡಲಾಗಿದೆ.

ಗುರು ನಾನಕ್‌ರವರ ಅಮೃತವಾಣಿ

ಸ್ತ್ರೀಯಿಂದಲೇ ನಮ್ಮ ಜನನ : ಅವಳ ಗರ್ಭಾಶಯದಲ್ಲೇ ನಾವು ರೂಪು ತಳೆದೆವು : ಸ್ತ್ರೀಯೊಂದಿಗೆ ನಮ್ಮ ವಿವಾಹ ; ಅವಳೇ ನಮ್ಮ ಸ್ನೇಹಿತೆ ; ಅವಳಿಂದಲೇ ನಮ್ಮ ಕುಟುಂಬ : ಸ್ತ್ರೀಯಿಂದಲೇ ನಮಗೆ ಹೊರ ಜಗತ್ತಿನ ಸಂಬಂಧ ; ರಾಜ ಮಹಾರಾಜರಿಗೆ ಹಾಗೂ ಜನಸಾಮಾನ್ಯರಿಗೆ ಜನ್ಮದಾತೆಯಾದ ಮಹಿಳೆ ಅನಿಷ್ಟ ಎಂದು ಭಾವಿಸದಿರಿ ; ಸ್ತ್ರೀಯಿಂದಲೇ ಸ್ತ್ರೀ ಜನಿಸುವಳು : ದೇವರನ್ನು ಬಿಟ್ಟರೆ ಅವಳಿಲ್ಲದ ಜಗತ್ತೇ ಶೂನ್ಯ.

ಈ ಭೂಮಿ ಹಾಗೂ ಈ ಆಕಾಶ ಎಲ್ಲವೂ ಅಸ್ಥಿರ ; ಆದರೆ ಒಬ್ಬನು ಮಾತ್ರ ಸ್ಥಿರವಾಗಿರುತ್ತಾನೆ ; ಅವನೇ ದೇವರು ; ಸೂರ್ಯ-ಚಂದ್ರರು, ಹಗಲು-ರಾತ್ರಿಗಳು ತಾರೆಗಳ ಸಮೂಹ ಎಲ್ಲವೂ ಕಣ್ಮರೆಯಾಗುತ್ತವೆ ; ಆದರೆ ದೇವರೆ ವಾಸ್ತವ ನ ಮಾತ್ರ ಚಿರಂತನವಾಗಿ ಉಳಿಯುತ್ತದೆ.

ವುಡ್‌ಲಾಂಡ್

ಜಯಪ್ರದ, 2ನೇ ಸಾರಿ

ಅನೋಘ ಪ್ರಾರಂಭ

— ಮನನೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್ —

ಹಮ್ ಸಾಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್

ಸಂಗೀತ : ಓ. ಪಿ. ನಯ್ಯರ್

[ದಿನ 3 ಪ್ರದರ್ಶನಗಳು]

ಅಪೆರಾ

21-11-69 ರಿಂದ

.... ಅತ್ಯನೋಘ ತಮಿಳು ಚಿತ್ರ ....

ದೈವಮುಗಂ

ಪಾತ್ರ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ

ದಿನ 3 ಆಟಗಳು

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ.
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ-ರೂ. 2

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ ಗೋವಧೆ ನಿಷೇಧವಾಗಲಿ

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4